ವಿಷಯ : ಕೇಂದ್ರ ಸರಕಾರದಿಂದ ಕಾರವಾರದಲ್ಲಿ ಯುವಜನ ವಿದ್ಯಾರ್ಥಿ ನಿಲಯದ ಮಂಜೂರಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೬೫೩ (೧೦೪೦)

ಶ್ರೀ ಪ್ರಭಾಕರ ಎಸ್ ರಾಣೆ (ಕಾರವಾರ):– ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಾರವಾರದಲ್ಲಿ ಕೇಂದ್ರ ಸರಕಾರವು ಯೂತ್ ಹಾಸ್ಟೆಲ್ ಮಂಜೂರು ಮಾಡಿರುವುದು ನಿಜವೇ;

ಆ) ಹಾಗಿದ್ದರೆ ಅದರ ಅಂದಾಜು ವೆಚ್ಚವೆಷ್ಟು; ಇದರಲ್ಲಿ ಕೇಂದ್ರ ಸರ್ಕಾರವು ಈಗಾಗಲೇ ಬಿಡುಗಡೆ ಮಾಡಿದ ಹಣವೆಷ್ಟು

ಇ) ಇದಕ್ಕೆ ಬೇಕಾದ ನಿವೇಶನವನ್ನು ರಾಜ್ಯ ಸರ್ಕಾರವು ಮಂಜೂರು ಮಾಡಿದೆಯೇ;

ಈ) ಹಾಗಿದ್ದರೆ ಸದರಿ ಯೂತ್ ಹಾಸ್ಟೆಲ್ ನಿರ್ಮಾಣ ಕಾರ್ಯ ಪ್ರಾರಂಭವಾಗದೇ ಇರಲು ಕಾರಣವೇನು

ಶ್ರೀ ಎಸ್. ರಮೇಶ್:– (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು :–

ಅ) ಹೌದು

ಆ) ಅಂದಾಜು ವೆಚ್ಚ ೨೪,೬೬,೭೦೦ ರೂ.ಗಳು ಇದುವರೆವಿಗೆ ಕೇಂದ್ರ ಸರ್ಕಾರವು ೧೫.೦೦ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ.

ಇ) ಹೌದು

ಈ) ಈ ಕೆಲಸವನ್ನು ಕೇಂದ್ರ ಲೋಕೋಪಯೋಗಿ ಇಲಾಖೆ ಮೂಲಕ, ಭಾರತ ಸರ್ಕಾರ ನಿರ್ವಹಿಸುತ್ತಿದೆ;

ಶ್ರೀ ಪ್ರಭಾಕರ ಎಸ್. ರಾಣೆ :– ಮಾನ್ಯ ಸಚಿವರು ಕೇಂದ್ರ ಸರ್ಕಾರ ಕಾರವಾರದಲ್ಲಿ ಮಂಜೂರ್ಮಾಡಿರುವ ಯೂತ್ ಹಾಸ್ಟೆಲಿನ ಅಂದಾಜು ವೆಚ್ಚವಾದ ೨೪,೬೬,೭೦೦ ರೂಪಾಯಿಗಳ ಪೈಕಿ ೧೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಾಗಿ ಹೇಳುತ್ತಿದ್ದಾರೆ. ಈ ಹಣವನ್ನು ಮಂಜೂರ್ಮಾಡಿದ್ದು ಯಾವಾಗ ಮತ್ತು ೧೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದುದು ಯಾವಾಗ ? ಅಲ್ಲದೆ ಈ ಹಾಸ್ಟೆಲಿನ ನಿರ್ಮಾಣ ಕಾರ್ಯ ಇನ್ನೂ ಪ್ರಾರಂಭವಾಗದೆ ಇರಲು ಕಾರಣವೇನು ಎಂಬ ಪ್ರಶ್ನೆಗೆ ಕೇಂದ್ರ ಲೋಕೋಪಯೋಗಿ ಇಲಾಖೆ ಮೂಲಕ ಭಾರತ ಸರ್ಕಾರ ಈ ಕೆಲಸ

ವನ್ನು ನಿರ್ವಹಿಸುತ್ತಿದೆ ಎಂದು ಹೇಳಿದ್ದಾರೆ. ಈ ಕೆಲಸ ವಿಳಂಬವಾಗುವುದಕ್ಕೆ ಇದೇ ಕಾರಣವೊ ಅಥವಾ ಬೇರೆ ಕಾರಣಗಳು ಇವೆಯೇ

ಶ್ರೀ ಎಸ್. ರಮೇಶ :– ಈಗಾಗಲೇ ತಿಳಿಸಿರುವ ರೀತಿ ೧೫ ಲಕ್ಷ ರೂಪಾಯಿ ಹಣ ೧೯೮೯ನೇ ಇಸವಿಯಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಬಂದಿದೆ. ಕೇಂದ್ರದ ಲೋಕೋಪಯೋಗಿ ಇಲಾಖೆಯವರು ಈಗಾಗಲೇ ಟೆಂಡರ ಕರೆದಿದ್ದಾರೆ. ರಾಜ್ಯ ಸರಕಾರದ ಒತ್ತಡದಿಂದ ಆದಷ್ಟು ಜಾಗ್ರತೆ ಈ ಕಾರ್ಯ ಪ್ರಾರಂಭವಾಗುತ್ತದೆ

ಶ್ರೀ ಪ್ರಭಾಕರ ಎಸ್. ರಾಣೆ :– ಈಗಾಗಲೇ ಹಣ ಬಿಡುಗಡೆಯಾಗಿ ೨ ವರ್ಷಕ್ಕಿಂತ ಹೆಚ್ಚು ಕಾಲ ಸಂದಿದೆ. ತಮಗೆ ಗೊತ್ತಿರುವ ಹಾಗೆ ಒಂದು ಸಾರಿ ಅಂದಾಜು ವೆಚ್ಚ ತಯಾರು ಮಾಡಿದ ಮೇಲೆ ಕೆಲಸ ಆಗದಿದ್ದರೆ ವರ್ಷ ವರ್ಷ ಪರಿಷ್ಕೃತ ದರಗಳು ಹೆಚ್ಚಾಗುತ್ತಾ ಹೋಗುತ್ತವೆ. ಹಿಂದಿನ ದರಗಳಲ್ಲಿ ಅಂದಾಜು ಮಾಡಿದ್ದು ಈಗ ಕಾರ್ಯಗತ ಮಾಡಬೇಕೆಂದರೆ ಯಾವ ರೀತಿ ತೊಂದರೆಯಾಗುತ್ತದೆಂದು ಸರಕಾರಕ್ಕೆ ಅನುಭವ ಇದೆ. ಹೀಗಿದ್ದಾಗ ಹಣ ಬಿಡುಗಡೆ ಮಾಡಿ ೨ ವರ್ಷ ಕಳೆದರೂ ನಿರ್ಮಾಣ ಕಾರ್ಯ ಪ್ರಾರಂಭಿಸುವುದಕ್ಕೆ ಆಸಕ್ತಿ ವಹಿಸದಿದ್ದರೆ ಆ ತಪ್ಪು ರಾಜ್ಯ ಸರಕಾರದ ಮೇಲೆ ಬರುತ್ತದೆ. ದಯವಿಟ್ಟು ಆದಷ್ಟು ಜಾಗ್ರತೆ ಒಂದು ನಿಗದಿತ ಕಾಲವನ್ನು ನಿರ್ದಿಷ್ಟಪಡಿಸಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಬೇಕು, ಮತ್ತು ಅದಕ್ಕೆ ಅಡಿಗಲ್ಲು ಇಡುವುದಕ್ಕೆ ತಾವೇ ಬರುವ ಒಂದು ದಿನಾಂಕವನ್ನು ನಿರ್ದಿಷ್ಟ ಪಡಿಸುತ್ತೀರಾ ?

ಶ್ರೀ ಎಸ್. ರಮೇಶ : ೧೯೮೯ರಲ್ಲಿ ನಾವು ಜಾಗ ಕೊಟ್ಟಿದ್ದೇವೆ ೧೯೮೮ರಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿ ಬಂದಿದೆ; ಮತ್ತು ಈಗಾಗಲೇ ಕೇಂದ್ರದ ಲೋಕೋಪಯೋಗಿ ಇಲಾಖೆಯವರು ಕೂಡ ಟೆಂಡರ ಕರೆದಿದ್ದಾರೆ. ಆದಷ್ಟು ಜಾಗ್ರತೆ ನಿರ್ಮಾಣ ಕಾರ್ಯವನ್ನು ಶುರು ಮಾಡಬೇಕೆಂದು ಆದೇಶವನ್ನು ನಾವು ಕಳುಹಿಸಿದ್ದೇವೆ. ಸಧ್ಯದಲ್ಲೇ ಅಡಿಗಲ್ಲು ಇಡುವ ದಿನಾಂಕವನ್ನು ಗೊತ್ತು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈ ಪ್ರಶ್ನೆ ೧೯೩೮ Urban Ceiling ಆ್ಯಕ್ಟಿನ ಕೆಳಗೆ ಕೇಳಿದ ಪ್ರಶ್ನೆಯಾಗಿರುವದರಿಂದ ಇದನ್ನು ಹೆಚ್.ಯು.ಡಿ.ಗೆ ಟ್ರಾನ್ಸಫರ್ ಮಾಡಬೇಕು.

ವಿಷಯ : ರೈತರಿಗೆ ಪಾಸ್ ಬುಕ್‌ಗಳನ್ನು ಒದಗಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೫೫ (೧೦೫)

ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?